ಶ್ರೀ ಆಲೂರು ಹನುಮಂತಪ್ಪ.—ಈಗ ತಾನೆ ಹೇಳಿದ್ದೇನೆ. ರೆಸ್ಟೊರೇಷನ್ ಕೆಲಸಕ್ಕೋಸ್ಕರ 9 ಕೆರೆಗಳ ಕೆಲಸ ಈಗಾಗಲೇ ಮುಗಿಸಿದ್ದೇವೆ ; 26 ಕೆರೆಗಳ ಕೆಲಸ ಪ್ರೋಗ್ರೆಸ್‌ನಲ್ಲಿದೆ ; 17 ಕೆರೆಗಳ ರೆಸ್ಟೊರೇಷನ್ ಕೆಲಸಕ್ಕೆ ಎಸ್ಟಿಮೇಟ್ ತಯಾರಾಗಿದೆ, ಜೊತೆಗೆ ಮೊದಲನೆ ಮತ್ತು ಎರಡನೆ ಯೋಜನೆಯಲ್ಲಿ ಸರ್ಕಾರ 40 ಕೆಲಸಗಳನ್ನು ಮಾಡಿ ಮುಗಿಸಿದೆ. 3,24,000 ರೂಪಾಯಿ ಅಂದಾಜಿನಲ್ಲಿ ಸುಮಾರು 1241 ಎಕರೆಗೆ ನೀರಾವರಿಯಗತಕ್ಕ ಕೆಲಸಗಳನ್ನು ಮಾಡಿ ಮುಗಿಸಿದೆ. 3ನೇ ಯೋಜನೆಯಲ್ಲಿ ಸುಮ 19,960 ರೂಪಾಯಿಗಳ 14 ಕೆಲಸಗಳನ್ನು ಈಗಾಗಲೆ ಮಾಡಿ ಮುಗಿಸಿದ್ದು ಆಗಿದೆಯೆಂದು ಹೇಳಿದೆ.

ಶ್ರೀ ಕೆ. ಪಿ. ರೇವಣಸಿದ್ದಪ್ಪ.—ಹೊಸ ಕೆರೆಗಳನ್ನು ಏತಕ್ಕೆ ಕಟ್ಟಿಲಿಲ್ಲ ಎಂದು ಉತ್ತರ ಹೇಳುವುದಕ್ಕೆ ಸಾಧ್ಯವೆ ? ಹೊಸ ಕೆರೆಗಳನ್ನು ಕಟ್ಟುವುದಕ್ಕಾಗಿ ಅರ್ಜಿಗಳು ಬಂದಿದ್ದರೆ, ಏತಕ್ಕೆ ಕಟ್ಟಿಲಿಲ್ಲ ?

ಶ್ರೀ ಆಲೂರು ಹನುಮಂತಪ್ಪ.—ನನ್ನ ಹತ್ತಿರವಿರುವ ವಿವರಗಳಲ್ಲಿ ಹೊಸ ಕೆರೆಗಳ ನಿರ್ಮಾಣದ ಬಗ್ಗೆ ಬಂದಿರುವ ಅರ್ಜಿಗಳ ವಿವರಗಳು ಇಲ್ಲ. ಅಲ್ಲಿ ಮಾಸ್ಟರ್ ಪ್ಲಾನ್‌ನಲ್ಲಿ ಮಾಡಬೇಕಾದಂತಹ ಕೆಲವು ಕೆಲಸಕಾರ್ಯಗಳ ಬಗ್ಗೆ ಮತ್ತೊಂದು ಪ್ರಶ್ನೆ ಹಾಕಿದರೆ ಹೇಳುತ್ತೇನೆ.

ಶ್ರೀ ಬಿ. ಎಚ್. ಲಕ್ಷ್ಮಣಯ್ಯ.—3ನೇ ಯೋಜನೆಯಲ್ಲಿ 14 ಕೆಲಸಗಳನ್ನು ತೆಗೆದುಕೊಂಡಿದ್ದೇವೆಂದು ಹೇಳಿದ್ದೀರಿ. ಸಕಲೇಶಪುರ ಸಬ್-ಡಿವಿಜನ್‌ನಲ್ಲಿ ಎಷ್ಟು ಕೆರೆಗಳು ಇವೆ ? ಮತ್ತು ಅಲ್ಲಿರುವ ಸಬ್-ಡಿವಿಜನ್ ಎಸ್ಟಾಬ್ಲಿಷ್‌ಮೆಂಟ್‌ಗಾಗಿ ಎಷ್ಟು ಖರ್ಚುಮಾಡುತ್ತಿದ್ದೀರಿ ? 14 ಕೆಲಸಕ್ಕೆ ಎಷ್ಟು ಖರ್ಚು ಮಾಡುತ್ತೀರಿ ?

ಶ್ರೀ ಆಲೂರು ಹನುಮಂತಪ್ಪ.—ಇಲ್ಲಿ ಪ್ರಶ್ನೆ ಇರುವುದು "number and names of tanks taken up for construction for the last 3 years."

Sanction of Lift Irrigation Schemes

*Q.—412. Sri B. H. LAKSHMANAIAH (Belur).—

Will the Government be pleased to state :—

(*a*) whether it is a fact that the ryots have requested them to sanction lift irrigation scheme to grow two crops utilising the waters of Kaveri, Hemavathi, Yagachi and their tributaries flowing in Hassan District ;

(*b*) if so, the number of such schemes before them and the amount required to implement the same ?

A.—Sri ALUR HANUMANTHAPPA (Deputy Minister for Minor Irrigation).—

(*a*) Yes.

(*b*) 18. Total estimated cost Rs. 20,92,000.

ಶ್ರೀ ಬಿ. ಎಚ್. ಲಕ್ಷ್ಮಣಯ್ಯ.—(b)ಗೆ ಉತ್ತರವಾಗಿ 18 ಅಂದಾಜುಗಳ ಯೋಜನೆಗಳನ್ನು ಮಂಜೂರು ಮಾಡಿದ್ದೇವೆಂದು ಹೇಳಿದ್ದೀರಿ ? 18 ಯೋಜನೆಗಳಲ್ಲಿ ಕಾವೇರಿ ನದಿಗೆ ಎಷ್ಟು ? ಹೇಮಾವತಿ ನದಿಗೆ ಎಷ್ಟು ಯಗಚಿ ನದಿಗೆ ಎಷ್ಟು ?

† ಶ್ರೀ ಆಲೂರು ಹನುಮಂತಪ್ಪ.—ಯಗಚಿ ನದಿಗೆ 5 ಸ್ಕೀಮ್‌ಗಳನ್ನು ತಯಾರು ಮಾಡಿದ್ದು ಆಗಿದೆ. ಸುಮಾರು 700 ಎಕರೆಗಳಿಗೆ ಅನೂಕೂಲವಾಗುತ್ತದೆ. ಕಾವೇರಿ ನದಿಗೆ 6 ಸ್ಕೀಮುಗಳನ್ನು ಸುಮಾರು 8,30,000 ರೂಪಾಯಿಗಳ ಅಂದಾಜಿನಲ್ಲಿ ತಯಾರು ಮಾಡಿದೆ. ಇದರಿಂದ 1645 ಎಕರೆಗೆ ಅನುಕೂಲವಾಗುತ್ತದೆ. ಹೇಮಾವತಿ ನದಿಗೆ 6 ಯೋಜನೆಗಳನ್ನು ಈಗಾಗಲೆ ಸಿದ್ಧಪಡಿಸ

(ಶ್ರೀ ಆಲೂರು ಹನುಮಂತಪ್ಪ)

ರಾಗುತ್ತದೆ. ಅದರ ಖರ್ಚು 5,90,000 ರೂಪಾಯಿ ಆಗುತ್ತದೆ. ಇದರಿಂದ 1421 ಎಕರೆಗೆ ಅನುಕೂಲವಾಗುತ್ತದೆ. ಕಬ್ಬಳ್ಳದಲ್ಲಿ ಒಂದು ಲಫ್ಟ್ ಇರಿಗೇಷನ್ ಸ್ಕೀಮ್ ಆಗತಕ್ಕ ಅವಕಾಶವಿದೆ. ಅದರ ಅಂದಾಜು 82 ಸಾವಿರ ರೂಪಾಯಿಗಳಾಗುತ್ತದೆ. 200 ಎಕರೆಗೆ ಅನುಕೂಲವಾಗುತ್ತದೆ. ಈ ರೀತಿಯಾಗಿ 4–5 ನದಿಗಳಿಗೆ ಯೋಜನೆಗಳು ಸಿದ್ಧವಾಗುತ್ತಿವೆ.

ಶ್ರೀ ಬಿ. ಎಚ್. ಲಕ್ಷ್ಮಣಯ್ಯ.—ನನ್ನ (ಅ) ಪ್ರಶ್ನೆಗೆ ಉತ್ತರವಾಗಿ 18 ಯೋಜನೆಗಳನ್ನು ಮಂಜೂರು ಮಾಡುತ್ತೇವೆಂದು ಹೇಳಿದೆ. ಅವನ್ನು ಯಾವಾಗ ಮಂಜೂರು ಮಾಡುತ್ತಾರೆ? ಇದರಿಂದ ನೀರಾವರಿಯಾಗತಕ್ಕ ಭೂಮಿ ಎಷ್ಟು?

ಶ್ರೀ ಆಲೂರು ಹನುಮಂತಪ್ಪ.—ನೀರಾವರಿಯಾಗತಕ್ಕ ಭೂಮಿ ಅಂದಾಜು ಮಾಡಿ ಎಂದು ಹೇಳಿದ್ದೇವೆ. ಅದರಲ್ಲಿ ಎಷ್ಟು ಮಂಜೂರು ಮಾಡುತ್ತಾರೆ ಎಂಬ ಬಗ್ಗೆ ಹೇಳಬೇಕಾದರೆ ಎಸ್ಟಿಮೇಟ್ಸ್ ಫೈನಲೈಜ್ ಆಗಬೇಕಾಗಿವೆ. ಆದಷ್ಟು ಬೇಗ ಲಫ್ಟ್ ಇರಿಗೇಷನ್ ಸ್ಕೀಮುಗಳನ್ನು ಜರೂರಾಗಿ ಮಾಡಬೇಕೆಂದು ಸರ್ಕಾರದವರು ಆದೇಶವನ್ನು ಕಳುಹಿಸಿದ್ದಾರೆ.

ಶ್ರೀ ಎಚ್. ಆರ್. ಕೇಶವಮೂರ್ತಿ.—ಹಾಸನ ಮತ್ತು ತುಮಕೂರು ಜಿಲ್ಲೆಗಳಲ್ಲಿ ಇರತಕ್ಕ ಡ್ರೈ ಏರಿಯಾಗಳಿಗೆ ಹೆಚ್ಚು ನೀರು ಬರುವುದಕ್ಕೆ ವ್ಯವಸ್ಥೆ ಮಾಡುತ್ತೇವೆಂದು ಹಿಂದೆ ಹೇಳಿದ್ದರು. ಈಗ ಹಾಸನ ಮತ್ತು ಅರಕಲಗೂಡು ತಾಲ್ಲೂಕುಗಳು ಡ್ರೈ ಏರಿಯಾ ಆಗಿರುವುದರಿಂದ ಆ ವಿಚಾರವನ್ನು ತಮ್ಮ ಗಮನದಲ್ಲಿಟ್ಟುಕೊಂಡು ಈಗಲಾದರೂ ಸಾಧ್ಯವಾದಷ್ಟು ಅಂದಾಜುಗಳನ್ನು ರಿವೈಸ್ ಮಾಡಿ ಆ ಡ್ರೈ ಏರಿಯಾಗಳಿಗೆ ಹೆಚ್ಚು ನೀರು ಬರುವ ಹಾಗೆ ಪ್ರಯತ್ನ ಮಾಡುತ್ತಾರೆಯೇ?

ಶ್ರೀ ಆಲೂರು ಹನುಮಂತಪ್ಪ.—ಹಾಸನ ಜಿಲ್ಲೆಯಲ್ಲಿ ಎಲ್ಲೆಲ್ಲಿ ಸಾಧ್ಯವಾಗುತ್ತದೋ, ಯಾವ್ಯಾವ ಕಡೆಗಳಲ್ಲಿ ಅನುಕೂಲವಾಗಿ ಇರುತ್ತದೋ, ಅಂತಹ ಕಡೆಗಳಲ್ಲಿ ಅವಶ್ಯಕವಿದ್ದರೆ ನೀರನ್ನು ಒದಗಿಸಲು ಪ್ರಯತ್ನಮಾಡುತ್ತೇವೆ.

ಶ್ರೀ ಬಿ. ಎಚ್. ಲಕ್ಷ್ಮಣಯ್ಯ.—ಹಾಸನ ಜಿಲ್ಲೆ ಬಹಳ ಅಭಾವ ಪ್ರದೇಶವೆಂದು ಮಂತ್ರಿ ಮಂಡಲದಲ್ಲಿಯೇ ಹಿಂದೆ ಒಂದು ಸಾರಿ ತೀರ್ಮಾನ ಮಾಡಿರುವ ಪ್ರಕಾರ ಹಾಸನದ ತಾಲ್ಲೂಕು ಬೋರ್ಡ್ ಮುಖಾಂತರ ಅಲ್ಲಿ 67 ಯೋಜನೆಗಳಿಗೆ ಅಂದಾಜು ತಯಾರು ಮಾಡಿದ್ದಾರೆಂದು ಹೇಳಿದರು. ಇವನ್ನು ಯಾವಾಗ ತಯಾರು ಮಾಡಿದ್ದಾರೆ?

ಶ್ರೀ ಆಲೂರು ಹನುಮಂತಪ್ಪ.—ಈಗಾಗಲೇ ಕೆಲವು ಅಂದಾಜುಗಳಿಗೆ ಮಂಜೂರಾತಿ ದೊರೆತಿದೆ. ಈ ವಿಚಾರದಲ್ಲಿ ಏನು ಮಾಡಬೇಕೆಂಬ ಕುತೂಹಲ ಮಾನ್ಯ ಸದಸ್ಯರಿಗೆ ಇರುವ ಹಾಗೆ ಸರ್ಕಾರಕ್ಕೂ ಇದೆಯೆಂದು ತಿಳಿಸಲಿಚ್ಛಿಸುತ್ತೇನೆ.

ಶ್ರೀ ಎಚ್. ಡಿ. ದೇವೇಗೌಡ.—18 ಯೋಜನೆಗಳ ಪೈಕಿ ಕೆಲವಕ್ಕೆ ಮಂಜೂರಾತಿ ದೊರಕಿದೆ. ಮತ್ತೆ ಕೆಲವಕ್ಕೆ ಇಲ್ಲವೆಂದು ಹೇಳಿದರು. ಒಂದು ವೇಳೆ ಮಂಜೂರಾತಿ ದೊರೆಯದೇ ಇದ್ದರೆ, ಪ್ರಯಾರಿಟಿ ನಿಗದಿ ಮಾಡಿ ಸರ್ಕಾರದವರು ಫೀಜಿಬಿಲಿಟಿ ವರದಿಯನ್ನು ಏನಾದರೂ ಆ ಬಗ್ಗೆ ತಯಾರು ಮಾಡಿದ್ದಾರೆಯೇ?

ಶ್ರೀ ಆಲೂರು ಹನುಮಂತಪ್ಪ.—ಈ 18 ಯೋಜನೆಗಳ ಪೈಕಿ ಕೆಲವಕ್ಕೆ ಅಂದಾಜು ಸಿದ್ಧವಾಗುತ್ತಿದೆ, ಮಂಜೂರಾತಿಯೂ ಸಿಗುತ್ತದೆ. ಯಾವುದು ಪ್ರಾಮುಖ್ಯವೋ ಅದನ್ನು ಜಾಗ್ರತೆಯಾಗಿ ಮಾಡುತ್ತಾರೆ.

Lift Irrigation Schemes sanctioned to the State

*Q.—515. Sri R. S. HEGDE (Honnavar).—

Will the Government be pleased to state :—

(*a*) how do the Government propose to distribute the Thirty-one Lift Irrigation Schemes sanctioned to the State by the Centre ;

(*b*) what is the time limit to fully implement the Scheme ?